ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

KARNATAKA SAMSKRIT UNIVERSITY

कर्नाटक–संस्कृत–विश्वविद्यालयः
श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, बेङ्गलूरु – ५६००१८.

## ದಿನಾಂಕ: 28–11–2023ರಂದು ನಡೆದ 45ನೇಯ ಹಣಕಾಸು ಸಮಿತಿ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 45ನೇಯ ಹಣಕಾಸು ಸಮಿತಿಯ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ:28.11.2023 ರಂದು ಮಂಗಳವಾರ ಬೆಳಗ್ಗೆ 10.30ಕ್ಕೆ ನಡೆಯಿತು.

**ಈ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು:**

1. ಡಾ. ಎಸ್. ಅಹಲ್ಯ, ಮಾನ್ಯ ಕುಲಪತಿಗಳು, ಕಸಂವಿ — ಅಧ್ಯಕ್ಷರು
2. ಶ್ರೀಮತಿ ಉಮಾ ಕೆ, ಜಂಟೀ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ — ಸದಸ್ಯರು
3. ಡಾ. ಎಸ್. ರೂಪಶ್ರೀ, ಕೆ.ಎ.ಎಸ್., ಕುಲಸಚಿವರು, ಕಸಂವಿ — ಸದಸ್ಯರು
4. ಶ್ರೀ. ಮಹಾಂತಪ್ಪ ಎಸ್. ತುರಕನೂರ, ಉಪ ಕಾರ್ಯದರ್ಶಿ (ಪ್ರ) (ತಾಂತ್ರಿಕ ಶಿಕ್ಷಣ ಹಾಗೂ ಯೋಜನೆ) ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು — ಸದಸ್ಯರು
5. ಪ್ರೊ. ವಿ ಗಿರೀಶ್‌ಚಂದ್ರ, ಡೀನ್, ಕಸಂವಿ — ಸದಸ್ಯರು
6. ವಿದ್ವಾನ್. ಎಸ್. ಕುಮಾರ, ಹಣಕಾಸು ಅಧಿಕಾರಿಗಳು, ಕಸಂವಿ — ಸದಸ್ಯ ಕಾರ್ಯದರ್ಶಿ

ಹಾಜರಿದ್ದ ಸದಸ್ಯರುಗಳನ್ನು ಅಧ್ಯಕ್ಷರ ಅಪ್ಪಣೆಯ ಮೇರೆಗೆ ಸ್ವಾಗತಿಸುತ್ತಾ, ಈ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

| | |
|---|---|
| ವಿಷಯ 1 | 44ನೇಯ ಹಣಕಾಸು ಸಮಿತಿ ಸಭೆಯ ನಡಾವಳಿಯನ್ನು ಸ್ಥಿರೀಕರಿಸುವ ಬಗೆಗೆ. |
| ಟಿಪ್ಪಣಿ | ದಿನಾಂಕ: 25.09.2023ರ ನಡಾವಳಿಯನ್ನು ಸ್ಥಿರೀಕರಣಕ್ಕಾಗಿ ಮಂಡಿಸಿದೆ. |
| ನಿರ್ಣಯ | ಸ್ಥಿರೀಕರಿಸಿತು. |
| ವಿಷಯ 2 | 44ನೇಯ ಸಭೆಯ ನಡಾವಳಿಯಂತೆ ಕ್ರಮವಹಿಸಲಾಗಿರುವ ಅನುಪಾಲನಾ ವರದಿಯನ್ನು ಅನುಮೋದಿಸುವ ಬಗೆಗೆ. |
| ಟಿಪ್ಪಣಿ | ದಿನಾಂಕ: 25.09.2023ರ ಸಭೆಯ ನಿರ್ಣಯದಂತೆ ಕ್ರಮವಹಿಸಲಾಗಿದೆ, ಅದರಂತೆ ಅನುಪಾಲನಾ ವರದಿಯನ್ನು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | ಅನುಮೋದಿಸಿತು. |
| ವಿಷಯ 3 | ಆಗಸ್ಟ್ 2023 ರಿಂದ ಅಕ್ಟೋಬರ್ 2023ರ ವರೆಗಿನ (03) ತಿಂಗಳ ಜಮಾ-ಖರ್ಚು ತಃಖ್ತೆಯನ್ನು ಅನುಮೋದಿಸುವ ಬಗೆಗೆ. |
| ಟಿಪ್ಪಣಿ | ಆಗಸ್ಟ್ 2023 ರಿಂದ ಅಕ್ಟೋಬರ್ 2023ರ ವರೆಗಿನ (03) ತಿಂಗಳ ಜಮಾ-ಖರ್ಚು ತಃಖ್ತೆಯನ್ನು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | ಅನುಮೋದಿಸಿತು. |

| | |
|---|---|
| ವಿಷಯ 4 | **ಸರ್ಟಿಫಿಕೇಟ್ ಕೋರ್ಸ್, ಡಿಪ್ಲೊಮಾ ಕೋರ್ಸ್ ಮತ್ತು ಪಿಜಿ ಡಿಪ್ಲೊಮಾ ಕೋರ್ಸ್‌ಗಳ ಶುಲ್ಕ ನಿಗಧಿಪಡಿಸುವ ಬಗೆಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಶೈಕ್ಷಣಿಕ ಕಾರ್ಯ ಚಟುವಟಿಕೆಗಳನ್ನು ಹೆಚ್ಚಿಸುವ ಹಾಗೂ ಮೂಲ ಧ್ಯೇಯೋದ್ದೇಶದಂತೆ ಶೈಕ್ಷಣಿಕ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸಲು ಈ ಕೆಳಕಂಡ ಹಲವು ಕೋರ್ಸ್‌ಗಳನ್ನು ಪ್ರಾರಂಭಿಸುವ ಸಲುವಾಗಿ ಈ ಕೆಳಕಂಡ ಶುಲ್ಕ ನಿಗಧಿಪಡಿಸಲು ಸಭೆಯ ಮುಂದೆ ಅನುಮೋದನೆಗಾಗಿ ಮಂಡಿಸಿದೆ.<br>• ವೃತ್ತಿಪರ ಸರ್ಟಿಫಿಕೇಟ್ ಕೋರ್ಸ್ – 2,000/–, ಎಸ್‌ಸಿ/ಎಸ್‌ಟಿ/ಕೆ.1 – 1,000/–<br>• ಡಿಪ್ಲೊಮಾ ಕೋರ್ಸ್ – 2,500/–, ಎಸ್‌ಸಿ/ಎಸ್‌ಟಿ/ಕೆ.1 – 1,250/–<br>• ಪಿಜಿ ಡಿಪ್ಲೊಮಾ ಕೋರ್ಸ್ – 3,000/–, ಎಸ್‌ಸಿ/ಎಸ್‌ಟಿ/ಕೆ.1 – 1,500/–<br>• ಇನ್ನಿತರ ಶೈಕ್ಷಣಿಕ ಸರ್ಟಿಫಿಕೇಟ್ ಕೋರ್ಸ್ – 500/– |
| ನಿರ್ಣಯ | **ಅನುಮೋದಿಸಿತು.** |
| ವಿಷಯ 5 | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದಿರುವ ಸಂಸ್ಥೆಗಳು ನಡೆಸುವ ಕೋರ್ಸ್‌ಗಳಿಗೆ ಶುಲ್ಕದ ಅನುಪಾತ ನಿಗಧಿಪಡಿಸುವ ಬಗೆಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದ ಸಂಸ್ಥೆಗಳು ನಡೆಸುವ ಕೋರ್ಸ್‌ಗಳ ಶುಲ್ಕದಲ್ಲಿ ಸಂಸ್ಥೆಯ ಮತ್ತು ವಿಶ್ವವಿದ್ಯಾಲಯದ ಅನುಪಾತ ನಿಗಧಿಪಡಿಸಲು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | **ಸಭೆಯಲ್ಲಿ ಸಮಗ್ರವಾಗಿ ಚರ್ಚಿಸಿದ ನಂತರ ಮಾನ್ಯತೆ ಪಡೆದ ಸಂಸ್ಥೆಗಳಿಗೆ ಶೇ. 75% ರಂತೆ ಹಾಗೂ ವಿಶ್ವವಿದ್ಯಾಲಯಕ್ಕೆ ಶೇ. 25% ಅನುಪಾತದಲ್ಲಿ ನಿಗಧಿಪಡಿಸಲು ಸಭೆಯು ಒಪ್ಪಿತು.** |
| ವಿಷಯ 6 | **ಸಂದರ್ಶಕ ಪ್ರಾಧ್ಯಾಪಕರು /ಸಹ ಪ್ರಾಧ್ಯಾಪಕರು/ಸಹಾಯಕ ಪ್ರಾಧ್ಯಾಪಕರುಗಳಿಗೆ ಗೌರವ ಸಂಭಾವನೆಯನ್ನು ನಿಗಧಿಪಡಿಸುವ ಬಗೆಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಲ್ಲಿ ನಡೆಯುವ ಕೋರ್ಸ್‌ಗಳ ಪಾಠ–ಪ್ರವಚನಗಳಿಗೆ ಆಗಮಿಸುವ ಸಂದರ್ಶಕ ಪ್ರಾಧ್ಯಾಪಕರು /ಸಹ ಪ್ರಾಧ್ಯಾಪಕರು/ಸಹಾಯಕ ಪ್ರಾಧ್ಯಾಪಕರುಗಳಿಗೆ ಒಂದು ಅವಧಿಗೆ ಗೌರವ ಸಂಭಾವನೆಯನ್ನು ನಿಗಧಿಪಡಿಸಲು ಸಭೆಯ ಮುಂದೆ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಸಭೆಯಲ್ಲಿ ಚರ್ಚಿಸಿದ ನಂತರ ಈ ಕೆಳಕಂಡಂತೆ ತಿರ್ಮಾನ ಕೈಗೊಂಡಿತು.**<br>• **ಕೋರ್ಸ್‌ಗಳ ಪಾಠ–ಪ್ರವಚನಗಳಿಗಾಗಿ ಬರುವ ಸಂದರ್ಶಕ ಪ್ರಾಧ್ಯಾಪಕರು /ಸಹ ಪ್ರಾಧ್ಯಾಪಕರು/ಸಹಾಯಕ ಪ್ರಾಧ್ಯಾಪಕರುಗಳಿಗೆ (01) ಅವಧಿಗೆ (01 ಗಂಟೆ ಅವಧಿಗೆ) ಗೌರವ ಸಂಭಾವನೆಯನ್ನು ತಲಾ ರೂ. 1,000/–ಗಳಂತೆ ಅದು ಮಾಸಿಕ ಮೊತ್ತ ರೂ. 10,000/–ಗಳಿಗೆ ಮೀರದಂತೆ ನಿಗಧಿಪಡಿಸಲು ಒಪ್ಪಿತು.**<br>• **ಸೆಮಿನಾರ್ ಹಾಗೂ ಇತರೆ ಕೋರ್ಸ್‌ಗಳಿಗೆ ಬರುವ ಹಿರಿಯ ಪ್ರಾಧ್ಯಾಪಕರುಗಳು/ ವಿದ್ವಾಂಸರುಗಳಿಗೆ 01 ಅವಧಿಗೆ (01 ಗಂಟೆ ಅವಧಿಗೆ) ಆಹ್ವಾನಿಸುವಾಗ–ಸಂದರ್ಶಕ ಪ್ರಾಧ್ಯಾಪಕರಿಗೆ ರೂ. 2,000/–, ಸಹ ಪ್ರಾಧ್ಯಾಪಕರಿಗೆ ರೂ. 1,500/– ಹಾಗೂ ಸಹಾಯಕ ಪ್ರಾಧ್ಯಾಪಕರಿಗೆ ರೂ. 1,000/–ಗಳಂತೆ ಅದು ಮಾಸಿಕ ಮೊತ್ತ ರೂ. 10,000/–ಗಳಿಗೆ ಮೀರದಂತೆ ನಿಗಧಿಪಡಿಸಲು ಒಪ್ಪಿತು. ಸದರಿ ಮೊತ್ತವನ್ನು ನಿಗಧಿಪಡಿಸುವ ಅಂತಿಮ ತೀರ್ಮಾನವನ್ನು ಮಾನ್ಯ ಕುಲಪತಿಗಳ ವಿವೇಚನೆಗೆ ನೀಡಲು ಸಭೆಯು ಒಪ್ಪಿತು.** |
| ವಿಷಯ 7 | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ವತಿಯಿಂದ ನಡೆದ ಸೇತುಬಂಧ–02 ಮತ್ತು ವಿಶೇಷ ತರಬೇತಿ ಕಾರ್ಯಗಾರದ ಖರ್ಚು–ವೆಚ್ಚದ ಸ್ಥಿರೀಕರಣದ ಬಗೆಗೆ.** |
| ಟಿಪ್ಪಣಿ | ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ವತಿಯಿಂದ ಸಂಸ್ಕೃತ ಪಾಠಶಾಲಾ ಶಿಕ್ಷಕರಿಗೆ ಸೇತುಬಂಧ–02 ತರಬೇತಿ ಶಿಬಿರ ಹಾಗೂ ಆಯ್ದ ಶಿಕ್ಷಕರಿಗೆ ವಿಶೇಷ ತರಬೇತಿ ಕಾರ್ಯಗಾರದ ಒಟ್ಟು ವೆಚ್ಚ ರೂ.2,92,627/–ಗಳು ಖರ್ಚಾಗಿದ್ದು ಇದರ ಸ್ಥಿರೀಕರಣಕ್ಕಾಗಿ ಸಭೆಯ ಮುಂದೆ ಮಂಡಿಸಿದೆ. |

| | |
|---|---|
| ನಿರ್ಣಯ | ಸ್ಥಿರೀಕರಿಸಿತು ಹಾಗೂ ಪ್ರಶಂಸಿಸಿತು. |
| ವಿಷಯ 8 | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ನೌಕರರುಗಳ ಎನ್.ಪಿ.ಎ.ಸ್ ಪಾವತಿ ಬಗೆಗೆ. |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ನೌಕರರುಗಳ ಎನ್.ಪಿ.ಎಸ್ ಪಾವತಿಯು ಜೂನ್ 2023ರ ರಿಂದ ಬಾಕಿಯಿದ್ದು, ಇದರ ಬಾಬ್ತು ತಿಂಗಳಿಗೆ ಅಂದಾಜು ರೂ. 7,25,000/-ಗಳಂತೆ (ಜೂನ್ 2023 ರಿಂದ ಮಾರ್ಚ್ 2024ರ ವರೆಗೆ) 10 ತಿಂಗಳಿಗೆ 72,50,000/-ರೂಗಳು ಬೇಕಾಗಿರುತ್ತದೆ. ಸರ್ಕಾರದಿಂದ ಅನುದಾನ ಬಿಡುಗಡೆಯಾಗದಿರುವುದರಿಂದ ಹಾಗೂ ಆಂತರೀಕ ಸಂಪನ್ಮೂಲದ ತೀವ್ರ ಕೊರತೆ ಇರುವುದರಿಂದ ಇದನ್ನು ಹೇಗೆ ಭರಿಸಬೇಕೆಂದು ತೀರ್ಮಾನಿಸಲು ಸಭೆಯ ಮುಂದೆ ತೀರ್ಮಾನಕ್ಕಾಗಿ ಮಂಡಿಸಿದೆ. |
| ನಿರ್ಣಯ | **2023-24ನೇ ಸಾಲಿನಲ್ಲಿ ಸರ್ಕಾರವು ಅಭಿವೃದ್ಧಿ ಅನುದಾನವನ್ನು ಒದಗಿಸಿರುವುದಿಲ್ಲ, ಹಾಗೆಯೇ ವಿಶ್ವವಿದ್ಯಾಲಯದ ಆರ್ಥಿಕ ಕೊರತೆಯಿಂದಾಗಿ ನೌಕರರುಗಳ ಎನ್‌ಪಿಎಸ್ ಪಾವತಿಸಲಾಗಿಲ್ಲ ಎಂಬ ಅಂಶವನ್ನು ಸಭೆಯು ಗಮನಿಸಿತು. ವಿಶ್ವವಿದ್ಯಾಲಯದ ಎಲ್ಲಾ ಸಿಬ್ಬಂದಿಗಳ ವೇತನವು ಹೆಚ್.ಆರ್.ಎಂ.ಎಸ್ ಮೂಲಕ ಬಿಡುಗಡೆಯಾಗುತ್ತಿರುವುದರಿಂದ, ಸರ್ಕಾರದ ಪಾಲಾದ ಎನ್.ಪಿ.ಎಸ್ ವಂತಿಗೆ ಶೇ. 14% ಬಿಡುಗಡೆ ಮಾಡುವಂತೆ ಅಥವಾ ಹೆಚ್.ಆರ್.ಎಂ.ಎಸ್ ಮೂಲಕ ಸರ್ಕಾರದ ಪಾಲಾದ ಎನ್.ಪಿ.ಎಸ್‌ನನ್ನು ಸೇರ್ಪಡೆ ಮಾಡಲು ಖಜಾನೆಗೆ ಸೂಚಿಸುವಂತೆ ಕೋರಿ ಮಾನ್ಯ ಕುಲಪತಿಗಳಿಂದ ಸರ್ಕಾರಕ್ಕೆ ಪ್ರಸ್ತಾವನೆಯೊಡನೆ ಅಗತ್ಯ ಮಾಹಿತಿ ಮತ್ತು ವಿವರಗಳನ್ನು ಸಲ್ಲಿಸಲು ಸಭೆಯು ಒಪ್ಪಿತು.** |
| ವಿಷಯ 9 | **ರಾಜ್ಯಸ್ತರೀಯ ಸ್ಪರ್ಧೆಗಳ ಖರ್ಚು-ವೆಚ್ಚಗಳ ನಿರ್ವಹಣೆಗಾಗಿ ಅಂದಾಜು 8.00 ಲಕ್ಷಗಳನ್ನು ಮರು ಹೊಂದಾಣಿಕೆ ಮಾಡುವ ಬಗೆಗೆ.** |
| ಟಿಪ್ಪಣಿ | ಪ್ರತಿ ವರ್ಷ ರಾಜ್ಯಸ್ತರೀಯ ಸ್ಪರ್ಧೆಗಳನ್ನು ವಿಶ್ವವಿದ್ಯಾಲಯವು ಆಯೋಜಿಸುತ್ತಾ ಬಂದಿರುತ್ತದೆ. ಸಂಸ್ಕೃತ ಸಂಭಾಷಣ ಶಿಬಿರದ ಅಡಿಯಲ್ಲಿ ರೂ. 6.00 ಲಕ್ಷಗಳನ್ನು ಕ್ರಿಯಾ ಯೋಜನೆಯಲ್ಲಿ ಒದಗಿಸಲಾಗಿತ್ತು. ಕ್ರಿಯಾ ಯೋಜನೆಯಂತೆ ಇಲ್ಲಿಯವರೆಗೆ 2,37,908/-ರೂಗಳು ಖರ್ಚಾಗಿದ್ದು, ಉಳಿಕೆ ರೂ. 3,62,093/- ಇರುತ್ತದೆ. ಸದರಿ ಮೊತ್ತವು ಈ ವರ್ಷದ ಉಳಿದ (03) ಮತ್ತು (04)ರ ಸೇತುಬಂಧ ಪುನಶ್ಚೇತನ ಶಿಬಿರಕ್ಕೆ ಬಳಸಬೇಕಿರುತ್ತದೆ. ಮುಂದುವರೆದು, ಅನುದಾನ ಮತ್ತು ಆರ್ಥಿಕ ಸಂಪನ್ಮೂಲದ ಕೊರತೆಯಿಂದ ರಾಜ್ಯಸ್ತರೀಯ ಸ್ಪರ್ಧೆಗಳಿಗೆ ಅಂದಾಜನ್ನು ಆಯೋಜನೆಯ ರೂಪರೇಷ ತಯಾರಿಸುವಾಗ ಮರುಹೊಂದಾಣಿಕೆ ಮಾಡುವ ದೃಷ್ಟಿಯಿಂದ ಹಾಗೆಯೇ ಇಡಲಾಗಿತ್ತು. ಈ ವರ್ಷ ರಾಜ್ಯಸ್ತರೀಯ ಸ್ಪರ್ಧೆಗಳನ್ನು ಆಯೋಜಿಸಲು ತೀರ್ಮಾನಿಸಿರುವುದರಿಂದ ಈ ಕೆಳಕಂಡ ಕ್ರಿಯಾ ಯೋಜನೆಯಲ್ಲಿ ಒದಗಿಸಲಾಗಿರುವ ಶೀರ್ಷಿಕೆ ಅಡಿಯಲ್ಲಿ ಉಳಿಕೆಯಾಗಿರುವ ಮೊತ್ತವನ್ನು ಮರು ಹೊಂದಾಣಿಕೆ ಮಾಡಿಕೊಂಡು ರಾಜ್ಯಸ್ತರೀಯ ಸ್ಪರ್ಧೆಗಳಿಗೆ ಬಳಸಿಕೊಳ್ಳುವ ವಿಷಯವನ್ನು ಸಭೆಯ ಮುಂದೆ ಅನುಮೋದನೆಗಾಗಿ ಮಂಡಿಸಿದೆ. |

| ಕ್ರಸಂ | ಲೆಕ್ಕ ಶೀರ್ಷಿಕೆ: 010 | ಒದಗಿಸಿರುವ ಮೊತ್ತ | ಖರ್ಚಾದ ಮೊತ್ತ | ಉಳಿಕೆ |
|---|---|---|---|---|
| 01 | ಸಂಸ್ಕೃತದ ಬಗ್ಗೆ ಮಾಹಿತಿ/ಅರಿವು ಮತ್ತು ಶಿಕ್ಷಣಕ್ಕಾಗಿ | 5,00,000.00 | 5,000.00 | 4,95,000.00 |
| 02 | ಮಹಿಳಾ ವಿದ್ಯಾರ್ಥಿಗಳಿಗೆ ಹಾಸ್ಟಲ್ ವ್ಯವಸ್ಥೆಗಾಗಿ | 3,00,000.00 | 47,741.00 | 2,52,259.00 |
| | ಒಟ್ಟು | **8,00,000.00** | **52,741.00** | **7,47,259.00** |

| | |
|---|---|
| ನಿರ್ಣಯ | **ಮರು ಹೊಂದಾಣಿಕೆಯನ್ನು ಮಾಡಿಕೊಳ್ಳಲು ಸಭೆಯು ಅನುಮೋದಿಸಿತು.** |
| ವಿಷಯ 10 | **ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ವಿವಿಧ ಕೋರ್ಸ್‌ಗಳಿಗೆ ಏಕರೂಪದ ವಿದ್ಯಾರ್ಥಿ ಶುಲ್ಕ ಹಾಗೂ ಏಕರೂಪದ ಪರೀಕ್ಷಾ ಸಂಭಾವನೆಯನ್ನು ಅಳವಡಿಸಿಕೊಳ್ಳುವ ಬಗೆಗೆ.** |

| | |
|---|---|
| ಟಿಪ್ಪಣಿ | ಸರ್ಕಾರದ ಉನ್ನತ ಶಿಕ್ಷಣ ಇಲಾಖೆ, ವಿಶ್ವವಿದ್ಯಾಲಯದ ಪತ್ರ ಸಂಖ್ಯೆ: ಇಡಿ/385/ಯುಆರ್‌ಸಿ/2022, ದಿನಾಂಕ: 16.10.2023ರಲ್ಲಿ ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಡುವ ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಅಡಿಯಲ್ಲಿ ನಿಯಂತ್ರಿಸಲ್ಪಡುವ ಸಂಯೋಜನೆಗೊಳಿಸುವ ಹಾಗೂ ಏಕಾತ್ಮಕ ವಿಶ್ವವಿದ್ಯಾಲಯವು ಸೇರಿದಂತೆ ಎಲ್ಲಾ ವಿಶ್ವವಿದ್ಯಾಲಯದ ವಿವಿಧ ಕೋರ್ಸ್‌ಗಳಿಗೆ ಏಕರೂಪ ವಿದ್ಯಾರ್ಥಿ ಶುಲ್ಕ, ಏಕರೂಪ ಪರೀಕ್ಷಾ ಸಂಭಾವನೆ ಹಾಗೂ ಪರೀಕ್ಷಾ ವ್ಯವಸ್ಥೆಯನ್ನು ಸುವ್ಯವಸ್ಥೆತೆಗೊಳಿಸಲು ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಇವರ ಅಧ್ಯಕ್ಷತೆಯಲ್ಲಿ ವರದಿ ಸಲ್ಲಿಕೆಯಾಗಿದ್ದಂತೆ, ಅದರನ್ವಯ ಸಮಿತಿಯ ಶಿಫಾರಸ್ಸು ಮಾಡಿರುವ ವಿವಿಧ ಶುಲ್ಕವನ್ನು ನಿಯಮಾನುಸಾರ ಅಳವಡಿಸಿಕೊಂಡು ಕೈಗೊಂಡ ಕ್ರಮದ ಕುರಿತು ಸರ್ಕಾರಕ್ಕೆ ವರದಿ ನೀಡುವಂತೆ ನಿರ್ದೇಶಿಸಲ್ಪಟ್ಟಿರುತ್ತದೆ. ಈ ವಿಷಯವನ್ನು ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | **ವಿಶ್ವವಿದ್ಯಾಲಯವು ಪ್ರಸ್ತುತ ಅಳವಡಿಸಿಕೊಂಡಿರುವ ಶುಲ್ಕಗಳ ವಿವರಗಳನ್ನು ಗಮನಿಸಿತು ಹಾಗೂ ಸಮಗ್ರವಾಗಿ ಚರ್ಚಿಸಿತು. ವಿಶ್ವವಿದ್ಯಾಲಯವು ಪ್ರಾರಂಭಗೊಂಡು 13 ವರ್ಷಗಳು ಕಳೆದಿದ್ದು, ಬೆಳವಣಿಗೆಯನ್ನು ಕಾಣುತ್ತಾ ಬರುತ್ತಿದೆ. ಈ ವಿಶ್ವವಿದ್ಯಾಲಯವು ಸಾಂಪ್ರದಾಯಕ ಹಾಗೂ ಪಾರಂಪರಿಕ ಶಿಕ್ಷಣಕ್ಕೆ ಹೊಂದಿಕೊಂಡಂತೆ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಹಾಗೂ ಮೂಲಧ್ಯೆಯೋದ್ದೇಶದಂತೆ ಕಾರ್ಯ ನಿರ್ವಹಿಸುತ್ತಿದೆ. ವಿಶ್ವವಿದ್ಯಾಲಯವು ಸರ್ಕಾರವು ನಿಗಧಿ ಪಡಿಸಿರುವ ಶುಲ್ಕಕ್ಕಿಂತ ಅಂದಾಜು ಶೇ. 60% ರಷ್ಟು ಕಡಿಮೆ ಶುಲ್ಕ ನಿಗಧಿಪಡಿಸಿರುವುದನ್ನು ಸಭೆಯು ಗಮನಿಸಿತು. ಪ್ರಸ್ತುತ ಸನ್ನಿವೇಶದಲ್ಲಿ ಸರ್ಕಾರದ ಏಕರೂಪ ವಿದ್ಯಾರ್ಥಿ ಶುಲ್ಕ, ಏಕರೂಪ ಪರೀಕ್ಷಾ ಸಂಭಾವನೆ ಹಾಗೂ ಪರೀಕ್ಷಾ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ಕಾಲಾವಕಾಶದ ಅವಶ್ಯಕತೆ ಇರುತ್ತದೆ. ಅಲ್ಲಿಯವರೆಗೆ ಯಥಾಸ್ಥಿತಿಯನ್ನು ಹಾಗೆಯೇ ಮುಂದುವರೆಸಲು ಒಪ್ಪಿತು. ಮುಂದುವರೆದು, ವಾಸ್ತವಾಂಶಗಳೊಡನೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಸೂಚಿಸಿತು.** |
| **ವಿಷಯ 11** | **ಪಿ.ಹೆಚ್‌ಡಿ ನೊಂದಣಿ ಶುಲ್ಕವನ್ನು 5,000/- ರೂಗಳಿಗೆ ನಿಗಧಿಪಡಿಸುವುದನ್ನು ಸ್ಥಿರೀಕರಿಸುವ ಬಗೆಗೆ.** |
| ಟಿಪ್ಪಣಿ | ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಪಿ.ಹೆಚ್‌ಡಿ ವಿದ್ಯಾರ್ಥಿಗಳಿಗೆ ಈಗಾಗಲೇ 7,000/- ರೂಗಳು ವಾರ್ಷಿಕ ಪ್ರವೇಶ ಶುಲ್ಕ ನಿಗಧಿಪಡಿಸಿದ್ದು ಚಾಲ್ತಿಯಲ್ಲಿದೆ. ಆದರೆ ನೊಂದಣಿ ಶುಲ್ಕ ನಿಗಧಿಪಡಿಸದ ಕಾರಣ 2021-22ರ ಬ್ಯಾಚ್‌ನಿಂದ ರೂ.5,000/-ಗಳನ್ನು ನಿಗಧಿಪಡಿಸಲು ನಿರ್ಣಯವಾಗಿರುತ್ತದೆ. ಅದರಂತೆ ಇನ್ನು ಮುಂದೆ ವಿಶ್ವವಿದ್ಯಾಲಯದಲ್ಲಿ ನಡೆಯುವ ಪಿ.ಹೆಚ್‌ಡಿ ಕೋರ್ಸ್‌ನ ನೊಂದಣಿ ಶುಲ್ಕವನ್ನು 5,000/- ರೂಗಳಿಗೆ ನಿಗಧಿಪಡಿಸಿರುವ ಅಂಶವನ್ನು ಸಭೆಯ ಮುಂದೆ ಸ್ಥಿರೀಕರಣಕ್ಕಾಗಿ ಮಂಡಿಸಿದೆ. |
| ನಿರ್ಣಯ | **ಸ್ಥಿರೀಕರಿಸಿತು.** |
| **ವಿಷಯ 12** | **ವಿಶ್ವವಿದ್ಯಾಲಯದ ಸಮಿತಿಗಳಿಗೆ ಆಗಮಿಸುವ ಸದಸ್ಯರುಗಳಿಗೆ ಕಾರಿನ ಪ್ರಯಾಣ ವೆಚ್ಚ ಹಾಗೂ ಈಗ ಹಾಲಿ ಕಾರಿನ ಕಿ.ಮೀ ದರ ರೂ. 8.00 ರಿಂದ 10.00 ರೂಗೆ ಪರಿಷ್ಕರಿಸುವ ಬಗೆಗೆ.** |
| ಟಿಪ್ಪಣಿ | ಪ್ರಶಾಸನ ಸಮಿತಿ, ಪ್ರಶಿಕ್ಷಣ ಸಮಿತಿ, ಹಣಕಾಸು ಸಮಿತಿ ಹಾಗೂ ಇನ್ನಿತರ ಎಲ್ಲಾ ಸಮಿತಿಗಳಿಗೆ ಆಗಮಿಸುವ ಸದಸ್ಯರುಗಳಿಗೆ ಕಾರಿನ ಪ್ರಯಾಣ ವೆಚ್ಚ ಕಿ.ಮೀ 8.00 ರೂಗಳನ್ನು ನೀಡುತ್ತಿದ್ದು, ಇದನ್ನು ಪರಿಷ್ಕರಿಸಿ 10.00 ರೂಗಳಿಗೆ ಹೆಚ್ಚಿಸುವ ಬಗ್ಗೆ ಸಭೆಯ ಮುಂದೆ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ರೂ. 10.00ಗಳಿಗೆ ಹೆಚ್ಚಿಸಿ ಪರಿಷ್ಕರಿಸಲು ಸಭೆಯು ಒಪ್ಪಿತು. ಹಾಗೆಯೇ ಪರಿಷ್ಕರಿಸುವ ಮುನ್ನ ಸದರಿ ಮೊತ್ತವು ಕೆ.ಸಿ.ಎಸ್.ಆರ್‌ರಂತೆ ಇರುವ ಬಗ್ಗೆ ಖಾತರಿಪಡಿಸಿಕೊಂಡು ಪರಿಷ್ಕರಿಸಲು ಒಪ್ಪಿತು.** |
| **ವಿಷಯ 13** | **ಪಿ.ಹೆಚ್‌ಡಿ ವೈವಾಗೆ ಆಗಮಿಸುವ ಹೊರ ರಾಜ್ಯದ ವಿದ್ವಾಂಸರುಗಳಿಗೆ ಕಾರಿನ ವೆಚ್ಚ ಹಾಗೂ ವಿಮಾನ ಪ್ರಯಾಣ ವೆಚ್ಚವನ್ನು ನೀಡುವ ಬಗೆಗೆ.** |
| ಟಿಪ್ಪಣಿ | ವಿಶ್ವವಿದ್ಯಾಲಯದಲ್ಲಿ ನಡೆಯುವ ಪಿ.ಹೆಚ್‌ಡಿ ವೈವಾಗೆ ಆಗಮಿಸುವ ಹೊರ ರಾಜ್ಯದ ವಿದ್ವಾಂಸರುಗಳಿಗೆ ಕಾರಿನ ದರ ಹಾಗೂ ವಿಮಾನ ವೆಚ್ಚವನ್ನು ಪಾವತಿಸುವ ಬಗ್ಗೆ ಸಭೆಯ ಮುಂದೆ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಯು.ಜಿ.ಸಿ/ ಕೆ.ಸಿ.ಎಸ್.ಆರ್‌ರಂತೆ ವೆಚ್ಚವನ್ನು ನಿಯಮಾನುಸಾರ ನೀಡಲು ಸಭೆಯು ಒಪ್ಪಿತು.** |

| | ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿತವಾದ ಇತರೆ ವಿಷಯಗಳು |
|---|---|
| ವಿಷಯ 01 | **ಆಡಿಟ್ ಆಕ್ಷೇಪಣೆಯಂತೆ ಯು.ಜಿ.ಸಿ ವೇತನ ಸಿಬ್ಬಂದಿಗಳಿಗೆ 7ನೇ ವೇತನ ಹಿಂಬಾಕಿಯಲ್ಲಿ ಹೆಚ್ಚುವರಿ ಸಂದಾಯವಾದ ಮೊತ್ತವನ್ನು ಹಿಂಪಡೆಯುವ ಬಗೆಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 13 ಯು.ಜಿ.ಸಿ ವೇತನ ಸಿಬ್ಬಂದಿಗಳಿಗೆ 7ನೇ ವೇತನ ಹಿಂಬಾಕಿಯಲ್ಲಿ ಒಟ್ಟು ಹೆಚ್ಚುವರಿಯಾಗಿ ರೂ. 20,89,023.00ಗಳು ಸಂದಾಯಮಾಡಲಾಗಿತ್ತು. ಸರ್ಕಾರದ ಆದೇಶದಂತೆ 2021–22ನೇ ಸಾಲಿನ ಆಡಿಟ್‌ನಲ್ಲಿ ಆಕ್ಷೇಪಣೆಯನ್ನು ಸಲ್ಲಿಸಿರುವುದರಿಂದ ದಿನಾಂಕ:20.11.2023 ರಂದು 06 ಕಂತುಗಳಲ್ಲಿ (ನವೆಂಬರ್ 2023 ರಿಂದ ಏಪ್ರಿಲ್ 2024) ಹಿಂಪಡೆಯಲು ಆದೇಶ ಹೊರಡಿಸಿದರನ್ವಯ ಯು.ಜಿ.ಸಿ ಬೋಧಕ ಸಿಬ್ಬಂದಿಗಳು ದಿನಾಂಕ: 23.11.2023ರಂದು ಕಟಾವಣೆ ಮಾಡಬಾರದೆಂದು ಮನವಿ ಸಲ್ಲಿಸಿರುತ್ತಾರೆ. ಈ ಬಗ್ಗೆ ನಿರ್ದೇಶನ ಕೋರಿ ಸಭೆಯ ಮುಂದೆ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಸಭೆಯಲ್ಲಿ ಸಮಗ್ರವಾಗಿ ಚರ್ಚಿಸಲಾಯಿತು. ರಾಜ್ಯ ಲೆಕ್ಕಪರಿಶೋಧಕರ ವರದಿಯಲ್ಲಿ ಹೆಚ್ಚುವರಿಯಾಗಿ ಸಂದಾಯವಾಗಿರುವ ಹಿಂಬಾಕಿಯನ್ನು ಹಿಂಪಡೆಯುವಂತೆ ಆಕ್ಷೇಪಣೆ ಮಾಡಿರುವುದರಿಂದ ಸದರಿಯವರುಗಳ ವೇತನದಲ್ಲಿ ಕಟಾವಣೆ ಮಾಡಲು ಹೊರಡಿಸಿರುವ ಆದೇಶವನ್ನು ಸಭೆಯು ಒಪ್ಪಿತು. ಕಟಾವಣೆ ಮಾಡುವಾಗ ಸದರಿಯವರುಗಳೊಡನೆ ಚರ್ಚಿಸಿ ಆರು ತಿಂಗಳ ಬದಲಾಗಿ 01 ವರ್ಷದ ಅವಧಿಯವರೆಗೆ ವಿಸ್ತರಿಸಲು ಸಭೆಯು ಒಪ್ಪಿಗೆ ನೀಡಿತು.** |
| ವಿಷಯ 02 | **IKS (Indian Knowledge System) ಕೋರ್ಸ್ ನಡೆಸಲು ದೇಣಿಗೆ ನೀಡಿರುವ ಬಗೆಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವತಿಯಿಂದ IKS (Indian Knowledge System) ಕೋರ್ಸ್‌ನನ್ನು ನಡೆಸಲು ಶ್ರೀ ಗುರುಪ್ರಸಾದ್ ಬಿ.ಜೆ, Linear System ಮತ್ತು ಶ್ರೀ ಅಮರಕುಮಾರ್ ಬಿ.ಜೆ, Digital Devices ರವರು ತಲಾ ರೂ. 1,00,000/–ಗಳ ಹಾಗೇ 2,00,000/– ರೂಗಳನ್ನು ದೇಣಿಗೆ ನೀಡಿರುತ್ತಾರೆ. ಈ ಹಣವನ್ನು ನಿಯಮಾನುಸಾರ ಖರ್ಚು–ವೆಚ್ಚಗಳನ್ನು ನಿರ್ವಹಿಸಲು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | **ದೇಣಿಗೆ ನೀಡಿರುವ ಗಣ್ಯರ ಮೂಲ ಆಶಯದಂತೆ ಖರ್ಚು–ವೆಚ್ಚಗಳನ್ನು ನಿರ್ವಹಣೆ ಮಾಡಲು ಸಭೆಯು ಅನುಮೋದಿಸಿತು.** |

ಮೇಲ್ಕಂಡ ವಿಷಯಗಳನ್ನು ಹೊರತು ಪಡಿಸಿ ಇತರೆ ವಿಷಯಗಳು ಚರ್ಚೆಗೆ ಬಾರದ ಕಾರಣ ಮಾನ್ಯ ಅಧ್ಯಕ್ಷರ ಅಪ್ಪಣೆಯೊಂದಿಗೆ ಹಾಜರಿದ್ದ ಎಲ್ಲಾ ಸದಸ್ಯರಗಳಿಗೂ ವಂದಿಸಿ ಸಭೆಯು ಮುಕ್ತಾಯಗೊಂಡಿತು.

28/11/23

**(ಎಸ್. ಕುಮಾರ)**
**ಹಣಕಾಸು ಅಧಿಕಾರಿಗಳು**
ಸದಸ್ಯ ಕಾರ್ಯದರ್ಶಿ

**(ಡಾ. ಎಸ್. ಅಹಲ್ಯ)**
**ಕುಲಪತಿಗಳು**
ಅಧ್ಯಕ್ಷರು

**ದಿನಾಂಕ: 28.11.2023.**